**9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.313/2018**

**(ಚಾ.ಸಾ.2/ಪ್ರಾ.ಸಾ.2)**

ತಾಃ 18.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು: | ಗಣೇಶ |
| ತಂದೆಯ ಹೆಸರು | ಮುರುಗಪ್ಪ |
| ವಯಸ್ಸು | 48 ವರ್ಷ |
| ಉದ್ಯೋಗ | ಆಟೋ ಚಾಲಕ |
| ವಾಸ ಸ್ಥಳ | ಕೊಣೇನ ಅಗ್ರಹಾರ |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ.1 ನನಗೆ ಗೊತ್ತು. ಆರೋಪಿಗಳು ನನಗೆ ಪರಿಚಯ ಇಲ್ಲ. ದೃಶಾವಳಿ ಮುಖಾಂತರ ಹಾಜರುಪಡಿಸಿದ 6 ನೇ ಆರೋಪಿಯನ್ನು ನಾನು ನೋಡಿಲ್ಲ. ಮೃತ ಗಿರೀಶ ನನಗೆ ಗೊತ್ತು. ಚಾಸಾ.1 ರವರು 10 ವರ್ಷಗಳಿಂದ ನನಗೆ ಪರಿಚಯ ಇದ್ದಾರೆ. ಸುಮಾರು 7 ವರ್ಷಗಳ ಹಿಂದೆ ಕಾಂಗ್ರೆಸ್ ಮುಖಂಡ ಎಸ್ ಸಿ ಶ್ರೀನಿವಾಸರವರ ಹುಟ್ಟುಹಬ್ಬದ ಕಾರ್ಯಕ್ರಮ ಹೊಸಕೋಟೆ ರಸ್ತೆಯ ಕಾಡುಗೋಡಿಯಲ್ಲಿ ಇದ್ದು ನಾನು, ಮೃತ ಗಿರಿಧರ, ಚಾಸಾ.1 ಮತ್ತು ಇತರೆ 5 ಜನ ಹೋಗಿದ್ದೇವು. ಕಾರ್ಯಕ್ರಮ ಮುಗಿಸಿಕೊಂಡು ಮಧ್ಯಾಹ್ನ 3.00 ರಿಂದ 3.30 ರ ಸಮಯದಲ್ಲಿ ವಾಪಸ್ ಬರುತ್ತಿರುವಾಗ ಸುಮಾರು 30 ರಿಂದ

40 ಜನರ ಗುಂಪು ರಸ್ತೆಯಲ್ಲಿ ಬಂದು ನಾವು ಪ್ರಯಾಣಿಸುತ್ತಿದ್ದ ಕಾರ್ ಅನ್ನು ತಡೆದು ನಮಗೆ ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿರುತ್ತಾರೆ. ನನಗೆ ಪ್ರಜ್ಞೆತಪ್ಪಿ ಹೋಗಿತ್ತು. ಯಾರು ಯಾರಿಗೆ ಹಲ್ಲೆ ಮಾಡಿದ್ದಾರೆ ಎಂದು ನಾನು ನೋಡಲಿಲ್ಲ. ನನ್ನ ಬೆನ್ನಿಗೆ ಏಟಾಗಿತ್ತು. ಯಾರು ಯಾವ ಆಯುಧದಿಂದ ಹಲ್ಲೆ ಮಾಡಿದ್ದಾರೆ ಎಂದು ತಿಳಿಯಲಿಲ್ಲ. ಚಾಸಾ.1 ಮತ್ತು ಮೃತ ಗಿರಿಧರ ರವರಿಗೆ ಯಾರು ಹಲ್ಲೆ ಮಾಡಿದರು ಎಂದು ನನಗೆ ಪ್ರಜ್ಞೆ ಇಲ್ಲದ ಕಾರಣ ನಾನು ನೋಡಲಿಲ್ಲ. ನನ್ನನ್ನು ಯಾರೋ ಆಸ್ಪತ್ರೆಗೆ ಸೇರಿಸಿದ್ದರು. ನಂತರ ನನಗೆ ಪ್ರಜ್ಞೆ ಬಂದಾಗ ಗಿರಿಧರನು ಮರಣ ಹೊಂದಿದ್ದಾನೆ ಎಂದು ತಿಳಿಯಿತು. ನಾನು ಪೊಲೀಸರಿಗೆ ಹೇಳಿಕೆ ನೀಡಿರುವುದಿಲ್ಲ. ನ್ಯಾಯಾಲಯದ ಮುಂದೆ ಇರುವ ಮು.ಮಾ. ಗಳನ್ನು ನಾನು ನೋಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>

2. ನಾನು ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ಚಾಸಾ.1 ಮತ್ತು ಆರೋಪಿತರಿಗೂ ಆಗಾಗ್ಗೆ ಸಣ್ಣ ಪುಟ್ಟ ಗಲಾಟೆಗಳು ಆಗುತ್ತಿದ್ದವು ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ. ದಿಃ12.01.2017 ರಂದು ಬೆಳಿಗ್ಗೆ 11.30 ಗಂಟೆಯಲ್ಲಿ ಕಾಡುಬೀಸನಹಳ್ಳಿಯಿಂದ ಶ್ರೀನಿವಾಸರವರ ಹುಟ್ಟುಹಬ್ಬ ಕಾರ್ಯಕ್ರಮಕ್ಕೆ ಹೋಗಿ ಅದನ್ನು ಮುಗಿಸಿಕೊಂಡು ಮೃತ ಗಿರಿಧರನು ಕೆಎ-03/ಎಮ್‌ಜೆಡ್-2250 ಕಾರ್ ಅನ್ನು ಚಾಲನೆ ಮಾಡಿಕೊಂಡು ಬಂದಿದ್ದು ನನ್ನ ಪಕ್ಕದಲ್ಲಿ ಚಾಸಾ.1 ಹಿಂಬದಿಯ ಸೀಟಿನಲ್ಲಿ ರಾಜು, ಗಿರಿಧರ ಕುಳಿತುಕೊಂಡಿದ್ದರು ಎಂದರೆ ಸರಿ. ನಮ್ಮ ಕಾರಿನ ಹಿಂದೆ ಚಾಸಾ.1 ರವರ ತಮ್ಮ ಮಂಜುನಾಥ, ಅವರ ಸ್ನೇಹಿತರಾದ ಮಂಜು, ಮಂಜನಾಥ, ಸುಹಾಸ್, ನಾಗ, ಅರುಣ

ಮತ್ತು ಮಧು ತಮ್ಮ ದ್ವಿಚಕ್ರ ವಾಹನಗಳಲ್ಲಿ ಬರುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಮಧ್ಯಾಹ್ನ 3.15 ರ ಸಮಯದಲ್ಲಿ ವರ್ತೂರು ಕೋಡಿ ಬಳಿ ಬರುತ್ತಿದ್ದಾಗ ಒಂದು ಕಾರು ನಮ್ಮ ಕಾರಿನ ಬಲಗಡೆಯಿಂದ ಮುನ್ನುಗ್ಗಿ ನಾನು ಚಾಲನೆ ಮಾಡುತ್ತಿದ್ದ ಕಾರಿಗೆ ಅಡ್ಡ ಬಂದು ನಿಲ್ಲಿಸಿದ್ದು ಅದರ ಹಿಂದೆ ಮತ್ತೊಂದು ಬಿಳಿ ಬಣ್ಣದ ಕಾರು ಸಹ ಬಂದು ನಿಂತಿತ್ತು ಎಂದರೆ ಸರಿಯಲ್ಲ. ಕಾರಿನಿಂದ 1ನೇ ಆರೋಪಿ ರೋಹಿತ್ ಮತ್ತು ಇತರ ಆರೋಪಿಗಳು ಇಳಿದು ಕಾರಲ್ಲಿ ತಂದಿದ್ದ ಮಾರಕಾಸ್ತ್ರಗಳನ್ನು ತೆಗೆಯುತ್ತಿದ್ದು ಆಗ ಚಾಸಾ.1 ರವರು ತಪ್ಪಿಸಿಕೊಂಡು ಕಾರಿನಿಂದ ಇಳಿದು ಹಿಂದಕ್ಕೆ ಓಡಿರುತ್ತಾರೆ ಎಂದರೆ ಸುಳ್ಳು.

3. ಆರೋಪಿಗಳು ನನ್ನನ್ನು ಹಾಗೂ ರಾಜು ಮತ್ತು ಗಿರಿಧರರವರನ್ನು ಹೊಡೆಯಲು ಬಂದಾಗ ನಾನು ಪ್ರಾಣಭಯದಿಂದ ಕಾರ್ ಅನ್ನು ಬೇಕರಿಯ ಆವರಣಕ್ಕೆ ನುಗ್ಗಿಸಿದಾಗ ಸುಮಾರು 14-15 ಜನ ಆರೋಪಿಗಳು ಮಚ್ಚು, ಲಾಂಗು, ಬ್ಯಾಟ್ ಗಳಿಂದ ನಮ್ಮ ಕಾರಿನ ಮೇಲೆ ಹಲ್ಲೆ ಮಾಡಿ 1ನೇ ಆರೋಪಿ ಬ್ಯಾಟ್ ನಿಂದ ನನ್ನ ಹೊಟ್ಟೆಯ ಬಲಭಾಗಕ್ಕೆ ಚುಚ್ಚಿ ನನ್ನ ಮೈಕೈಗೆ ಹೊಡೆದು ಗಾಯಗೊಳಿಸಿದ್ದಾನೆ ಎಂದರೆ ಸುಳ್ಳು. ಮತ್ತೋಬ್ಬ ಆರೋಪಿ ಲಾಂಗ್ ನಿಂದ ನನ್ನ ಬೆನ್ನಿಗೆ ಹೊಡೆದು ಕೊಲೆ ಮಾಡಲು ಪ್ರಯತ್ನಿಸಿದ್ದಾನೆ ಎಂದರೆ ಸುಳ್ಳು. ನಂತರ 1ನೇ ಆರೋಪಿ ಮತ್ತು ಇತರೆ ಆರೋಪಿಗಳು ಮೃತ ಗಿರಿಧರ್ ರವರಿಗೆ ಮಚ್ಚು ಮತ್ತು ಬ್ಯಾಟ್ ನಿಂದ ಹಲ್ಲೆ ಮಾಡಿ ಗಾಯಗೊಳಿಸಿದ್ದಾರೆ ಎಂದರೆ ಸುಳ್ಳು. ನಂತರ 1ನೇ ಆರೋಪಿಯು ಚಾಸಾ.1 ರವರ ಜೊತೆಯಲ್ಲಿ ಇರುವ ಯಾರನ್ನು ಬಿಡಬೇಡಿ ಎಂದು ಕಿರುಚಿ ಹೇಳಿದ್ದು, 1ನೇ ಆರೋಪಿ ತಲವಾರ್ ನಿಂದ ನನಗೆ ಹಲ್ಲೆ ಮಾಡಲು ಬಂದಾಗ ನಾನು ತಲವಾರ್ ಅನ್ನು ಹಿಡಿದುಕೊಂಡು ಜೋರಾಗಿ ಕಿರುಚಿಕೊಂಡಿದ್ದೇನೆ ಎಂದರೆ ಸುಳ್ಳು. ಆ ಸಮಯದಲ್ಲಿ ಉಳಿದ ಆರೋಪಿಗಳು ಕಾರಿನ ಗಾಜುಗಳನ್ನು ಒಡೆದು ಹಾಕಿ ಗಿರಿಧರ್ ನನ್ನು

ಲಾಂಗು, ಮಚ್ಚು ಮತ್ತು ಬ್ಯಾಟ್ ಗಳಿಂದ ಹಲ್ಲೆ ನಡೆಸಿರುತ್ತಾರೆ ಎಂದರೆ ಸುಳ್ಳು. ಕಾರಿನ ಒಳಭಾಗದಲ್ಲಿ ಇದ್ದ ರಾಜು ತಪ್ಪಿಸಿಕೊಂಡು ಬೇಕರಿಯ ಒಳಗೆ ಓಡಿ ಹೋದಾಗನಾನು ಸಹ ಅಲ್ಲಿಂದ ತಪ್ಪಿಸಿಕೊಂಡು ಬೇಕರಿಯ ಒಳಗೆ ಓಡಿ ಹೋಗಿದ್ದೇನೆ ಎಂದರೆ ಸುಳ್ಳು. ಸ್ವಲ್ಪ ಸಮಯದ ನಂತರ ಬೇಕರಿಯಿಂದ ಹೊರ ಬಂದಾಗ ಆರೋಪಿಗಳೆಲ್ಲಾ ಹೊರಟು ಹೋಗಿದ್ದು ನಂತರ ನಾವು ಗಿರಿಧರ ಮತ್ತು ಚಾಸಾ.1 ರವರನ್ನು ಕೊಲಂಬಿಯಾ ಏಷಿಯಾ ಆಸ್ಪತ್ರೆಗೆ ದಾಖಲಿಸಿದ್ದು ಗಿರಿಧರ ಚಿಕಿತ್ಸೆ ಫಲಕಾರಿಯಾಗದೇ ದಿಃ16.01.2017 ರಂದು ಮೃತಪಟ್ಟಿರುತ್ತಾನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿಗಳು ನನಗೆ, ಚಾಸಾ.1 ಮತ್ತು ಮೃತ ಗಿರಿಧರ ಹಾಗೂ ರಾಜು ಎಂಬುವವರಿಗೆ ಹಲ್ಲೆ ಮಾಡಿ ಗಿರಿಧರ ರವರನ್ನು ಕೊಲೆ ಮಾಡಿರುತ್ತಾರೆ ಎಂದು ಈಗ ಓದಿ ಹೇಳಿದಂತೆ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.3 ಎಂದು ಗುರುತಿಸಲಾಯಿತು. ಮೇಲ್ಕಂಡಂತೆ ಘಟನೆ ನಡೆದಿದ್ದರೂ ಸಹ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃಏನು ಇಲ್ಲ.**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ವಿಜಯ್ ಕುಮಾರ್)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.